ಆ ಹೊತ್ತಿನಲ್ಲಿ ಯಾರು ಬಂದರೆಂದು ಅಚ್ಚರಿಯಿಂದ ಕತ್ತೆತ್ತಿ ನೋಡಿದೆ. ಮನೆಯ ಹೆಬ್ಬಾಗಿಲಿನಿಂದ ಇಪ್ಪತ್ತು ಫೂಟು ದೂರದ ಕಬ್ಬಿಣದ ದೊಡ್ಡಗೇಟನ್ನು ತೆರೆದು ಉದ್ದಕ್ಕೂ ಹಾಸಿದ್ದ ಕಲ್ಲು ಚಪ್ಪಡಿಗಳ ಮೇಲೆ ನಡೆದು ಬರುತ್ತಿದ್ದ ಸ್ತ್ರೀ ಆಕೃತಿ... ಗೌರವರ್ಣದ ತುಂಬು ಮೈಕಟ್ಟಿನ ನಡುವಯಸ್ಸಿನ ಹೆಂಗಸು ತುಸು ಅನುಮಾನದಿಂದೆಂಬಂತೆ ಮನೆಯೊಳಗಣ ಆವಾರವನ್ನೇ ದಿಟ್ಟಿಸುತ್ತಾ ತಡೆ ತಡೆದು ಹೆಜ್ಜೆ ಹಾಕುತ್ತಿದ್ದಳು. ಆ ಕ್ಷಣ ಅವಳ್ಯಾರೆಂದು ಗೊತ್ತಾಗುವ ಯಾವ ಸಾಧ್ಯತೆಯೂ ನನಗಿರಲಿಲ್ಲ. ಬಿಚ್ಚಿದ್ದ ಪತ್ರಿಕೆಯನ್ನು ಅಲ್ಲೇ ಟೀಪಾಯಿ ಮೇಲಿರಿಸಿ ಓದುವ ಕನ್ನಡಕವನ್ನು ಕಳಚಿ ಅದರ ಮೇಲಿರಿಸಿ ತೆರೆದಿದ್ದ ಬಾಗಿಲಿಂದ ಕಾಣದಂತಿದ್ದ ಆಕೃತಿಯನ್ನು ಕಿಟಕಿಯ ಸರಳಿನ ನಡುವಿನಿಂದ ನೋಡಲುಪಕ್ರಮಿಸಿದೆ. ಅವಳುಟ್ಟ ಕಡುಗೆಂಪಿನ ಪುಟ್ಟ ಹೂಗಳ ವಿನ್ಯಾಸದ ಸೀರೆಯಡಿಯಲ್ಲಿ ಹೊಮ್ಮತ್ತಿದ್ದ ಅವಳ ಮೈ ಅವಳ ಗತವೈಭವವನ್ನು ಸಾರುವಂತೆ ಅವಳನ್ನು ಅನಾವರಣಗೊಳಿಸುತ್ತಿತ್ತು. ತುಂಡುತೋಳಿನ ರವಿಕೆಯೂ ಅವಳಿಗಿರಬಹುದಾದ ವಯಸ್ಸನ್ನು ಮುಚ್ಚಿಟ್ಟು ಬೇರೇನನ್ನೋ ಹೇಳಲು ಹವಣಿಸುತ್ತಿತ್ತು. ನನ್ನ ಮನೆಯ ಹೆಬ್ಬಾಗಿಲಿಗೆ ಮುಖ ಮಾಡಿ ನಡೆಯುತ್ತಿದ್ದವಳ ಮುಖ ಮುಮ್ಮೈಯ ಮೇಲೆ ಯಥೇಚ್ಛವಾಗಿ ಸುರಿಯುತ್ತಿದ್ದ ಬೆಳಗಿನ ಎಂಟರ ಸೂರ್ಯ ಅವಳ ಕಣ್ಣನ್ನು ಚುಚ್ಚುವ ಭಯದಿಂದೆಂಬಂತೆ ಅವಳು ಧರಿಸಿದ್ದ ಜೇನು ತುಪ್ಪದ ಬಣ್ಣದ ಕನ್ನಡಕ ಅವಳ ಬಾದಾಮಿಯಾಕಾರದ ಗೋಧಿ ಬಣ್ಣದ ಮುಖಕ್ಕೊಂದು ಅಪೂರ್ವ ಶೋಭೆಯನ್ನು ತಂದಿತ್ತಾದರೂ ಅದು ಅವಳ ವಯಸ್ಸನ್ನು ಮರೆಮಾಚುವಷ್ಟು ಶಕ್ತವಾಗಿರಲಿಲ್ಲ. ಅಷ್ಟರಲ್ಲಾಗಲೇ ಅವಳು ತೆರೆದ ಬಾಗಿಲ ಬಳಿ ಬಂದು ನಿಂತಾಗಿತ್ತು. ಅವಳ ಬಲಗೈಯಲ್ಲಿ ಅವಳು ಹಿಡಿದಿದ್ದ ರಕ್ತವರ್ಣದ ದುಬಾರಿ ಏರ್‌ಬ್ಯಾಗ್... ಹಿಂಗೈಯ ಮಣಿಕಟ್ಟಿನಲ್ಲಿ ತುಸುವು ಸರಿದಾಡಲು ಸಾಧ್ಯವಿಲ್ಲದ ಆ ಮೆಣಸಿನ ಬಳೆಗಳು... ಥಟ್ಟನೆ ಗುರುತು ಹತ್ತಿತ್ತು. ಅವಳು ಸುಶೀಲೆಯೆನ್ನಲು ಇನ್ಯಾವ ಪುರಾವೆಯೂ ಬೇಕಿರಲಿಲ್ಲ. ಆ ಬಳೆಗಳು... ಅಮ್ಮನ ಬಳೆಗಳು...

"ಸುಶೀಲ ಇದು ಇನ್ನು ನಂಗ್ಯಾಕೆ? ನೀನೇ ಇಟ್ಕೋ ನನ್ನ ಸುಕ್ಕು ಬಂದ ಕೈಗೆ ಇದು ಹಾಕ್ಕೊಂಡ್ರೊ ಚೆನ್ನಾಗಿ ಕಾಣೋದು ಅಷ್ಟರಲ್ಲೇ ಇದೆ. ನಿನ್ನ ಕೈ... ಬೆಳ್ಳಗೆ ಮುದ್ದಾಗಿ ಒಳ್ಳೆ ಹಾಲುಖೋವ ತರಹ ಇದೆ. ತಗೋ... ತಗೋ... ಬೇಡ ಅನ್ನೋ ಹಂಗಿಲ್ಲ. ಹಾಕ್ಕೋ..." ಹೀಗೇ... ಅಮ್ಮ ಯಾವಾಗ್ಲೂ ಹಾಗೇ. ಒಬ್ಬನೇ ಮಗನ ಹೆಂಡತಿ ಸೊಸೆಯಲ್ಲ ಮಗಳೆನ್ನುವ ಜೀವ. ತನ್ನದೆಲ್ಲ ಅವಳಿಗೇ ಅನ್ನುವಷ್ಟು ಅಕ್ಕರೆ ಕಕ್ಕುಲಾತಿ. ತನ್ನ ಒಂದೊಂದೇ ಸೀರೆ ಒಡವೆಗಳನ್ನು ಏನಾದರೂ ನೆಪ ಹೇಳಿ ಸೊಸೆಗೆ ಕೊಡಬೇಕು. ಅವಳದನ್ನು ಉಟ್ಟು ತೊಟ್ಟು ಮಾಡಬೇಕು. ಆ ಮುದಿ ಕಣ್ಣು ಅದನ್ನು ಕಂಡು ಹಿಗ್ಗಬೇಕು.

ಕೂತಲ್ಲಿಂದ ಏಳಲಾಗಲಿಲ್ಲ. ಕಡಿಮೆಯಾಯಿತೆ ವಯಸ್ಸು? ಈ ವೈಶಾಖಕ್ಕೆ ಅರವತ್ತೈದಾಗುತ್ತದೆ. ಅವಳಿಲ್ಲಿಂದ ಹೊರಟು ಮೂವತ್ತು ವರ್ಷವಾಯ್ತು! ಹಾಗೂ ಸಾವರಿಸಿಕೊಂಡು ನಿಧಾನ ಎದ್ದು ಬಾಗಿಲ ಬಳಿ ಹೋಗಿ ನಿಂತೆ. "ಪ್ಲೀಸ್ ಬಾಗಿಲಿಟ್ಟುಕೊಳ್ಳಬೇಡಿ" ಎಂದು ಅಂಗಲಾಚಿದಳು.

ಅವಳು ಹೋಗಿ ಒಂದೆರೆಡು ವರ್ಷಗಳಾಗಿತ್ತೇನೋ. ಒಮ್ಮೆ ಇದ್ದಕ್ಕಿದ್ದಂತೆ ಬಂದಿದ್ದಳು. ಇದೇ ರೀತಿ ಬೆಳ್ಳಂಬೆಳಿಗ್ಗೆ ಬಸ್ಸಿಳಿದು ಬಂದ ದಣಿದ ಮುಖ, ಕಣ್ಣ ಪಿಸುರೆ, ಹಲ್ಲುಜ್ಜದೆ ತೊಳೆಯದ ಮುಖ... ಆ ದಿನ ಬಾಗಿಲು ತೆರೆದಿಟ್ಟಿರಲಿಲ್ಲ. ಕಾಲಿಂಗ್ ಬೆಲ್ಲಾಯ್ತೆಂದು ಹೋಗಿ ತೆರೆದರೆ... ಅಂಥ ಅಲಂಕರಣವಿರದ ಹೊತ್ತಲ್ಲೂ ಕಣ್ಣು ಕೋರೈಸುವಂತೆ ನಿಂತಿದ್ದಳು. ಕಣ್ಣಲ್ಲೊಂದು ತಪ್ಪಿತಸ್ಥ ಭಾವ ಇತ್ತೇ? ಅಥವಾ ಅದು ಬರೀ ನನ್ನ ಭ್ರಮೆಯೆ? ದಡಾರನೆ ರಾಚಿದೆ. ಬಾಗಿಲು ಹೊಡೆದುಕೊಂಡ ಶಬ್ದಕ್ಕೆ ಇಡೀ ಮನೆಯೇ ಅದುರಿತ್ತು. ಮತ್ತೆ ಕರೆದಳು, ಗೋಗರೆದಳು... "ನನ್ನ ಕೆಲವು ಒಡವೆಗಳು